ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಮಂಗಳವಾರ, ದಿನಾಂಕ: 2ನೇ ಫೆಬ್ರುವರಿ, 2021

ಸುರಕ್ಷಿತ ಗಣಿ ಕೈಗಾರಿಕಾ ವಲಯದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡುತ್ತಿರುವ ಬಗ್ಗೆ

ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

165(72) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿ ಗಂಗಸಮುದ್ರ ಗ್ರಾಮದ ವ್ಯಾಪ್ತಿಯಲ್ಲಿ ಸರ್ವೆ ನಂ. 143ರಲ್ಲಿ 2013-14 ಸಾಲಿನಲ್ಲಿ 65 ಎಕರೆ ಭೂಮಿಯನ್ನು ಸುರಕ್ಷಿತ ಗಣಿ ಕೈಗಾರಿಕಾ ವಲಯದಲ್ಲಿ ಮೀಸಲಿಟ್ಟ ಪ್ರದೇಶ 4(1) ಆಗಿರುವಂತಹ ಪ್ರದೇಶದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಷರ್ ಮಾಲೀಕರು ಮತ್ತು ಸಂಬಂಧ ಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಂಡಿದೆ; (ವಿವರವಾದ ಮಾಹಿತಿಯನ್ನು ನೀಡುವುದು; ಗಂಗಸಮುದ್ರ ಎಲ್ಲೆ ಸರ್ವೆ ನಂ. 143ರ 65 ಎಕರೆ ಭೂ ಸುರಕ್ಷತಾಲಯಕ್ಕೆ ಮೀಸಲಿಟ್ಟಿರುವ 4(1) ಪ್ರತಿಯನ್ನು ಒದಗಿಸುವುದು)

(ಅ) ಸುತ್ತಮುತ್ತಲ ಗ್ರಾಮಗಳ ಗೊಲ್ಲರಹಳ್ಳಿ ಬಂಕಾಪುರ ಪಡುವಲ ಪಟ್ಟಣ ಗ್ರಾಮಗಳ ಜನರಿಗೆ ಈ ಅಕ್ರಮ ಗಣಿಗಾರಿಕೆಯಿಂದ ಮನೆಗಳು ಶಿಥಿಲಗೊಂಡಿರುವುದು ಹಾಗೂ ಮುಖ್ಯ ರಸ್ತೆಗಳು ಹದಗೆಟ್ಟಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರ್ವಜನಿಕರು ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)